ಭಾಗ್ಯಜ್ಯೋತಿ ದೀಪಗಳನ್ನು ಹರಿಜನ ಗಿರಿಜನರಿಗೆ ೧೯೮೯-೯೦ನೇ ಸಾಲಿಗೆ ಕೊಟ್ಟಿರುವ ವಿಚಾರ.

೧೧೩೪. ಶ್ರೀ ಕರಿಯಣ್ಣ (ಹೊಳೆಹೊನ್ನೂರು).—ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ್ಪ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

(ಅ) ರಾಜ್ಯದಲ್ಲಿ ಹರಿಜನ-ಗಿರಿಜನ ಮನೆಗಳಿಗೆ ವಿದ್ಯುತ್ ದೀಪ ಹಾಕಿಸಿಕೊಡಲು ಕೇಂದ್ರ ಸರ್ಕಾರದಿಂದ ೧೯೮೯-೯೦ನೇ ಸಾಲಿಗೆ ರಾಜ್ಯ ಸರ್ಕಾರಕ್ಕೆ ಬಂದ ಹಣವನ್ನು ಎಷ್ಟು ಮನೆಗಳಿಗೆ ಸಹಾಯಧನವಾಗಿ ನೀಡಲಾಗಿದೆ.

(ಆ) ಇದರಲ್ಲಿ ವೆಚ್ಚ ಮಾಡಲಾಗಿರುವ ಹಣವೆಷ್ಟು?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ಪಕ್ಷ್ಪ ಸಚಿವರು.)

(ಅ) ಕೇಂದ್ರ ಸರ್ಕಾರದಿಂದ ಸಹಾಯಧನ ಲಭ್ಯವಿರುವ 'ಕುಟೀರ್ ಜ್ಯೋತಿ' ಯೋಜನೆಯಡಿಯಲ್ಲಿ ೧೯೮೯-೯೦ನೇ ಸಾಲಿನಲ್ಲಿ ೧೫,೯೮೦ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿ ಮತ್ತು ಪಂಗಡ ಸೇರಿದಂತೆ ಕಡುಬಡವರ ಮನೆಗಳಿಗೆ ವಿದ್ಯುತ್ ದೀಪ ಸಂಪರ್ಕವನ್ನು ನೀಡಲಾಯಿತು (ಒಂದು ಬಲ್ಬು), ಇದರಲ್ಲಿ ೭,೦೮೫ ಮನೆಗಳು ಹರಿಜನ-ಗಿರಿಜನರಿಗೆ ಸೇರಿವೆ.

(ಆ) ಈ ಬಾಬ್ತಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು, ೧೯೮೯-೯೦ನೇ ಸಾಲಿನಲ್ಲಿ, ಒಟ್ಟು ೬೩.೯೨ ಲಕ್ಷ ರೂ ಗಳನ್ನು ವೆಚ್ಚ ಮಾಡಿದೆ, ಇದರಲ್ಲಿ ಮಂಡಳಿಗೆ ಕೇಂದ್ರ ಸರ್ಕಾರದ ಅನುದಾನವಾಗಿ ೩೩.೦೫ ಲಕ್ಷ ರೂ.ಗಳು ಬರಬೇಕಾಗಿದ್ದು, ಗ್ರಾಮೀಣ ವಿದ್ಯುದ್ದೀಕರಣ ನಿಗಮವು, ನವೆಂಬರ್ ೧೯೮೯ ರಲ್ಲಿ, ಮೊದಲ ಕಂತಾಗಿ, ೧೬.೭೯ ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದೆ. ಬಾಕಿ ಹಣವನ್ನು ಬಿಡುಗಡೆ ಮಾಡಬೇಕಾಗಿದೆ.

ಜನತಾ ಪ್ಲಾಟುಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ,

೧೧೫೧. ಶ್ರೀ ಮಂಜುನಾಥ ಸಿ. ಕುನ್ನೂರ, (ಶಿಗ್ಗಾಂವ).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಈ ರಾಜ್ಯದಲ್ಲಿ ಪ್ರತಿಯೊಂದು ಹಳ್ಳಿಯಲ್ಲಿರತಕ್ಕ ಜನತಾ ಪ್ಲಾಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವ ವ್ಯವಸ್ಥೆ ಮಾಡಲಾಗಿದೆಯೇ?

(ಆ) ಹಾಗಿದ್ದಲ್ಲಿ ಇನ್ನೂ ಎಷ್ಟು ದಿವಸಗಳಲ್ಲಿ ಈ ಕಾರ್ಯ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಮತ್ತು ವಕ್ಫ್ ಸಚಿವರು).

(ಅ) ಹೌದು.

(ಆ) ಈ ಕಾರ್ಯವನ್ನು ಹಂತ ಹಂತವಾಗಿ ಬರುವ ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಒದಗಿಸಿರುವ ಪಂಪು ಸೆಟ್ಟುಗಳ ಸಂಖ್ಯೆ.

೧೨೦೧. ಶ್ರೀ ಮಂಜುನಾಥ ಚ ಕನ್ನೂರ್ (ಶಿಗ್ಗಾಂವ).—ಮಾನ್ಯ ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ರಾಜ್ಯದಲ್ಲಿ ಎಷ್ಟು ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ. (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಸನ್ ೧೯೮೯-೯೦ನೇ ಸಾಲಿನಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ಗುರಿ ನಿಗದಿಪಡಿಸಿದ್ದೀರಿ?

(ಇ) ಸದರಿ ತಾಲ್ಲೂಕಿಗೆ ಏಕೆ ನಿರ್ದಿಷ್ಟ ಗುರಿ ಪ್ರಮಾಣದಲ್ಲಿ ಕಡಿಮೆ ಮಾಡಲಾಗಿದೆ?

ಶ್ರೀ ಎಸ್.ಎಂ. ಯಾಹ್ಯ (ಕೈಗಾರಿಕೆ, ಇಂಧನ ಹಾಗೂ ವಕ್ಫ್ ಸಚಿವರು).

(ಅ) ರಾಜ್ಯದಲ್ಲಿ ದಿನಾಂಕ ೩೧-೩-೧೯೯೦ರಲ್ಲಿರುವಂತೆ ೬,೭೩,೯೦೭ (ಹುಕ್ಕೇರಿ ತಾಲ್ಲೂಕು ಸೇರಿದಂತೆ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ (ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ)

(ಆ) ೧೯೯೯-೯೦ನೇ ಸಾಲಿನಲ್ಲಿ ಶಿಗ್ಗಾಂವ ತಾಲ್ಲೂಕಿನಲ್ಲಿ ನೀರಾವರಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಹಾಕಿಕೊಂಡಿದ್ದ ಗುರಿ ೮೦.

(ಇ) ಸದರಿ ತಾಲ್ಲೂಕಿಗೆ ನೀರಾವರಿ ಪಂಪು ಸೆಟ್ಟುಗಳ ವಿದ್ಯುದ್ದೀಕರಣಕ್ಕಾಗಿ ಗುರಿಯನ್ನು ಕಡಿಮೆ ಮಾಡಲಿಲ್ಲ.

ಅನುಬಂಧ

ಕ್ರ. ಸಂ.	ಜಿಲ್ಲೆ	ದಿನಾಂಕ ೩೧-೩-೯೦ರಲ್ಲಿರುವಂತೆ ನೀರಾವರಿ ಪಂಪು ಸೆಟ್ಟುಗಳ ಸಂಖ್ಯೆ
೧)	ಬೆಂಗಳೂರು	೭೧,೭೯೯
೨)	ಬೆಳಗಾಂ	೭೯,೩೪೧
೩)	ಬಳ್ಳಾರಿ	೨೧,೧೪೯
೪)	ಬೀದರ್	೨೫,೬೭೨
೫)	ಬಿಜಾಪುರ	೬೯,೬೫೭
೬)	ಚಿಕ್ಕಮಗಳೂರು	೭,೨೬೨
೭)	ಚಿತ್ರದುರ್ಗ	೩೮,೩೯೩
೮)	ಕೊಡಗು	೨,೩೧೬
೯)	ಧಾರವಾಡ	೩೧,೧೦೫
೧೦)	ಗುಲ್ಬರ್ಗಾ	೧೪,೯೪೨
೧೧)	ಹಾಸನ	೧೦,೫೯೬
೧೨)	ಕೋಲಾರ	೪೨,೬೦೦
೧೩)	ಮಂಡ್ಯ	೧೪,೭೫೧
೧೪)	ಮೈಸೂರು	೨೯,೦೪೯
೧೫)	ಉತ್ತರ ಕನ್ನಡ	೧೩,೬೩೧
೧೬)	ರಾಯಚೂರು	೨೪,೪೭೮
೧೭)	ಶಿವಮೊಗ್ಗ	೧೩,೬೦೫
೧೮)	ದಕ್ಷಿಣ ಕನ್ನಡ	೪೫,೨೨೨
೧೯)	ತುಮಕೂರು	೬೩,೫೩೨
		೬,೬೩,೪೯೦
	ಹುಕ್ಕೇರಿ ತಾಲ್ಲೂಕಿ	೧೦,೪೧೬
	ಒಟ್ಟು	೬,೭೩,೯೦೭